ಬೂಕನಕೆರೆ ವಿಜೇಂದ್ರ, ಮೈಸೂರು
ಕೆಲವರು ನಾಯಿಯನ್ನು ಪ್ರೀತಿಸುವಷ್ಟು ತಮ್ಮ ಮಕ್ಕಳನ್ನೂ ಪ್ರೀತಿಸುವುದಿಲ್ಲವಲ್ಲ?



ನಾಯಿ ಹೇಳಿದಂತೆ ಕೇಳುವುದು, ಮಕ್ಕಳು ಗುರ್ ಎನ್ನುವುದೇ ಅದಕ್ಕೆ ಕಾರಣವಂತೆ.

ಅನಸೂಯ ಟಿ. ಕೇದಿಗೆಮನೆ
ಪ್ರತಿವರ್ಷ ಪಿತೃಗಳಿಗೆ ಪಿಂಡ ಹಾಕಬೇಕೆನ್ನುವರಲ್ಲ, ಅವರು ಪಿತೃಲೋಕದಲ್ಲೇ ಇರುತ್ತಾರಾ? ಅವರಿಗೆ ಮರುಜನ್ಮ ಇಲ್ಲವೆ?
ಇದ್ದಿದ್ದರೆ ಫಾರ್ವರ್ಡಿಂಗ್ ಅಡ್ರೆಸ್ ಕೊಟ್ಟಿರುತ್ತಿದ್ದರಂತೆ.

ಬಿ.ಆರ್. ಉಷಾ, ಬೆಂಗಳೂರು
ಮದುವೆಗೆ ಮುಂಚೆ ಚಂದ್ರಮುಖಿ. ಮದುವೆಯ ನಂತರ?
ಚಂದ್ರಮುಖಿಯೇ; ಆಗಾಗ್ಗೆ ಗ್ರಹಣ ಹಿಡಿಯುತ್ತದಷ್ಟೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಮಾಂಗಲ್ಯ ಕಟ್ಟುವಾಗ 'ಸಾವಧಾನ' ಎನ್ನಲು ಕಾರಣವೇನು?



ಗೊತ್ತಿಲ್ಲದ ದಾರಿಯಲ್ಲಿ ಕಾಲಿಟ್ಟಾಗ 'ಎಚ್ಚರ!' ಎಂದು ಎಚ್ಚರಿಸುವುದು ಸಜ್ಜನಿಕೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಮಹಾ ವ್ಯಕ್ತಿಗೂ, ಪ್ರಸಿದ್ಧ ವ್ಯಕ್ತಿಗೂ ಇರುವ ವ್ಯತ್ಯಾಸವೇನು?
ಪ್ರಸಿದ್ಧ ವ್ಯಕ್ತಿ ಬಂಗಲೆ; ಮಹಾ ವ್ಯಕ್ತಿ ಅಡಿಪಾಯ.

ಮಲ್ಲಿಕಾರ್ಜುನ, ಸುರಧೇನುಪುರ
ಡಾ. ರಾಜ್‌ದು ರಾಜಮಾರ್ಗ; ಪುನೀತ್‌ರದು ಪುನೀತಮಾರ್ಗ. ನಿಮ್ಮದು...?
'ಪ್ರಶ್ನಿಸುವವರೇ ರಾಜರು' ಎಂಬ ವಿನೀತಮಾರ್ಗ.

ಜಯಲಕ್ಷ್ಮಿ ಉಪಾಧ್ಯಾಯ. ಕಂಚಾರ್ತಿ
ಕಾವಿ, ಖಾಕಿ, ಖಾದಿ; ಈ ಮೂರರಲ್ಲಿ ಯಾವುದಕ್ಕೆ ಸೇರಿದರೆ ಉತ್ತಮ?
ಈಗಿನ ಸ್ಥಿತಿಯಲ್ಲಿ ಸುರಬುದ್ಧಿಯಿದ್ದರೆ ಕಾವಿ; ನರಬುದ್ಧಿಯಿದ್ದರೆ ಖಾಕಿ; ನರಿಬುದ್ಧಿಯಿದ್ದರೆ ಖಾದಿ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಮನುಷ್ಯನ ಬಹು ದೊಡ್ಡ ಅಪರಾಧ ಯಾವುದು?
ಸ್ವರ್ಗದಂತಿದ್ದ ಭೂಮಿಯನ್ನು ನರಕದಂತಾಗಿಸಿದ್ದು.

ಬಿ. ಚಂದ್ರೇಗೌಡ, ಬೆಂಗಳೂರು
ದೇಹಕ್ಕೆ ಸ್ನಾನ ಮಾಡಿಸುವಂತೆ ಮನಸ್ಸಿಗೂ ಸ್ನಾನ ಮಾಡಿಸುವುದು ಹೇಗೆ?
ಕಷ್ಟವೇ; ಮನಸ್ಸು ಎಷ್ಟೇ ನಿಯಂತ್ರಿಸಿದರೂ ಸ್ನಾನವೆಂದಾಕ್ಷಣ ನುಣುಚಿಕೊಳ್ಳುವ ನಾಯಿ.

ಎ.ಹೆಚ್. ಪ್ರಸನ್ನಗಣಪತಿ, ಬೆಂಗಳೂರು
ಈಗಿನ ಯುವತಿಯರಿಗೆ ಬೇಕಿರುವುದು ಸ್ವಾತಂತ್ರ್ಯವೋ, ಸ್ವೇಚ್ಛಾಚಾರಕ್ಕೆ ಪರವಾನಗಿಯೋ?
ಅವರಿಗೆ ನಿಜಕ್ಕೂ ಬೇಕಾದ್ದು ಮುಜುಗರಕ್ಕೆ ಈಡುಮಾಡದಂತೆ ನಡೆದುಕೊಳ್ಳುವ ಸ್ವಸ್ಥ ಸಮಾಜ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ. ಇದರ ವಿವರಣೆ ಕೊಡುವಿರಾ?
'ಆಗಾಗ್ಗೆ ಕಾಲಿಗೆ ಬುದ್ಧಿ ಹೇಳುತ್ತಾರೆ' ಎಂದು. ಕೀಚಕರ ನಾಡಿನಲ್ಲಿ ಸ್ತ್ರೀಯರು ಇರಬೇಕಾದ್ದೇ ಹೀಗೆ.

ಪಿ.ಜೆ. ರಾಘವೇಂದ್ರ, ಮೈಸೂರು
ಸಾಹಿತ್ಯಕೃತಿಗಳಿಗಿಂತ ಡೈರಿ, ಕ್ಯಾಲೆಂಡರ್‌ಗಳ ಬಿಡುಗಡೆ ಕಾರ್ಯಕ್ರಮಗಳೇ ಹೆಚ್ಚಾಗುತ್ತಿವೆಯಲ್ಲ?
ಗುಡ್. ನಿಜಕ್ಕೂ ಜನರ ಬರವಣಿಗೆ ಮತ್ತು ಅಧ್ಯಯನವನ್ನು ಪ್ರಚೋದಿಸುವುದು ಇವೆರಡೇ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಜೀವನದಲ್ಲಿಯೇ ಅಡ್ಜಸ್ಟ್ ಮಾಡದೆ ಇರುವ ವಸ್ತು ಯಾವುದು?
ಯೂಸ್ ಅಂಡ್ ತ್ರೋ ಐಟಂಗಳು.

## ವಾರದ ಪ್ರಶ್ನೆ

ಮೇಟಿ ಕೊಟ್ರಪ್ಪ, ಬಸರಕೋಡು
ಮೂಕ ನೋಡಿದ್ದನ್ನು ಕುರುಡನಿಗೆ ಹೇಳುವ ಸ್ಥಿತಿ ದೇಶದ ಪರಿಸ್ಥಿತಿಯಾಗಿದೆಯಲ್ಲಾ...?
ಗುಡ್. ಕುರುಡನಿಗಾಗಿ ಮೂಕ ಬ್ರೈಲ್ ಕಲಿಯುವ ಮಟ್ಟಕ್ಕೆ ಸಾಮರಸ್ಯವಿದೆ ಎಂದಾಯ್ತು.

ಡಾ. ತಿಮ್ಮರಾಜು, ದಾವಣಗೆರೆ
ಆಜ್ಞೆಗೂ, ಸುಗ್ರೀವಾಜ್ಞೆಗೂ ಏನು ಸಂಬಂಧ?
ಆಜ್ಞೆ ಪಾಲಿಸದೆ ಕಪಿಯಂತೆ ಆಡುವವನೂ ಅನುಸರಿಸಲೇಬೇಕಾದ್ದೇ ಸುಗ್ರೀವಾಜ್ಞೆ.

ಕೆ. ಹರಿಪ್ರಸಾದ್ ಸಗ್ರಿ, ಕುಂಜಿಬೆಟ್ಟು
ಶ್ರೀಕೃಷ್ಣನನ್ನು ನಂಬುವ ನಾವು ಅವನ 'ವಸುಧೈವ ಕುಟುಂಬಕಂ' ತತ್ತ್ವವನ್ನೇಕೆ ನಂಬುವುದಿಲ್ಲ?
'ಚಾತುರ್ವರ್ಣಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ' ಎನ್ನುವುದನ್ನು ನಂಬಲು ಆಗದಿರುವುದರಿಂದ.

ಚಾಪಲ್ಮನೆ ಸುರೇಶ್ ನಾಯಕ್
ಪುರುಷರು ಸ್ತ್ರೀಯರ ಉಡುಪಿನ ಬಗ್ಗೆ ಬಹಳ ತಲೆ ಕೆಡಿಸಿಕೊಂಡಿದ್ದಾರಲ್ಲಾ, ಏಕೆ?



ರಂಗುರಂಗಿನ, ರಾಂಗುರಾಂಗಿನ, ಚುಂಗುಚುಂಗಿನ ಚಿಂದಿತುಣುಕಿನ ವಸ್ತ್ರ ಜಿಗ್ಸಾ ಪಝಲ್‌ನಂತೆ ಕಾಣುವುದಂತೆ.

ದಿನೇಶ್ ಎನ್.
ಸೀರಿಯಲ್ ಕನ್ನಡತಿಗೂ, ನಿಜವಾದ ಕನ್ನಡತಿಗೂ ಇರುವ ವ್ಯತ್ಯಾಸವೇನು ಸ್ವಾಮಿ?
ನಿಜವಾದ ಕನ್ನಡತಿಯ ಕನ್ನಡವು ನಿರೂಪಣೆ, ನಟನೆಯ ಸಮಯಕ್ಕೆ ಸೀಮಿತವಾಗಿರುವುದಿಲ್ಲ.

ಅಶೋಕ ಆರ್. ಹಾಲಣ್ಣವರ, ಲಕ್ಷ್ಮೇಶ್ವರ
ದೇವಸ್ಥಾನದ ಮುಂದೆಯೇ ಏಕೆ ಪಾದರಕ್ಷೆಗಳನ್ನು ಕಳ್ಳತನ ಮಾಡುತ್ತಾರೆ ಗುರೂಜೀ?
ಬಡವರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಚಪ್ಪಲಿ ಕೊಡುವ ಸಂಕಲ್ಪ ತೊಟ್ಟವನಿಗೆ ದಯಾಮಯನ ಶ್ರೀರಕ್ಷೆ ಇರುತ್ತದಂತೆ.

■ ರಾಮ್